# ಮರಿ ವಿಜ್ಞಾನಿ

## ಹೇರಾಸೆ

ನಮ್ಮಾಳು ನಿಂಗನು ತೋಟವನಗೆಯಲು
ನೋಡಿಯು ಬೈಯದೆ ಸುಮ್ಮನೆ ಇರುವೆ;
ಆದರೆ ನಾನಂತೆ ಮಾಡಲು ಹೋಗಲು
ಬೈಯುವೆ ಏತಕೆ ಹೇಳಮ್ಮಾ?

ಹಣ್ಣನು ಕೀಳಲು ಸೀಬೆಯ ಮರವನು
ನಿಂಗನು ಹತ್ತಲು ಮಾತಾಡದಿರುವೆ;
ಆದರೆ ನಾನದನಡರಲು ಹೋಗಲು
ಬೈಯುವೆ ಹೊಡೆಯುವೆ ಏಕಮ್ಮಾ?

ಕಾಲೆಲ್ಲ ಕೆಸರಾಗ, ಮೈಯೆಲ್ಲ ಮಣ್ಣಾಗಿ
ನಿಂಗನು ಬಂದರೆ ಮಾತಾಡದಿರುವೆ;
ನಾ ಮಾತ್ರ ಅಂಗಳಕ್ಕಿಳಿಯಲು ಕೆಸರೆಂದು
ಗುದ್ದುವೆ ಏತಕೆ ಹೇಳಮ್ಮಾ!

ಮಳೆ ಬಂದು ನೀರೆಲ್ಲ ಗಳಗಳ ಹರಿಯಲು
ನಿಂಗನು ಬರುವನು ಗದ್ದೆಯ ಹೂಡಿ;
ನಾ ಮಾತ್ರ ಹನಿಗಳ ಹಿಡಿಯಲು ಹೋಗಲು
'ಶೀತವೊ ಬೇಡೆಂಬೆ' ಏಕಮ್ಮಾ?

ನಿಂಗನು ಏನೇನು ಮಾಡಿದರೆಲ್ಲವ
ಬೈಯದೆ ಸುಮ್ಮನೆ ಮನ್ನಿಸುತಿರುವೆ;
ನಾನಾದರವುಗಳ ಮಾಡಲು ಹೋದರೆ
'ಪೋಕರಿ' ಎನ್ನುವೆ ಏಕಮ್ಮಾ?

ಅಂಗಿಯ ತೋಪಿಯ ಬಳೆಗಳ ಒಂಟಿಗ
ಳೆಲ್ಲವ ನಿಂಗಗೆ ಕೊಡುವೆನು ಅಮ್ಮಾ:

ಮೂರ್ತಿಯತನವಿದು ನನಗಿನ್ನು ಬೇಡಮ್ಮ;
ನಿಂಗನ ಹುದ್ದೆಯೆ ಸುಖವಮ್ಮಾ!

ನಾನಿನ್ನು ನಿಂಗ, ನಿಂಗನೆ ಮೂರ್ತಿ;
ನಿನ್ನನು ನಾನಿನ್ನು 'ನಾಗಮ್ಮ' ಎನ್ನುವೆ!
ಮುಂದಿನ್ನು ನಿಂಗನೆ ನಿನ್ನಯ ಕೈದಿಯು,
ನಾ ನಾಳೆ ನಮ್ಮಾಳು ನಿಂಗಾಗುವೆ! —

ನಿಂಗಾ! ನಿಂಗಾ! ನಾ ನಿಂಗಾ !
ಇನ್ ಮೇಲೆ ನಾ ನಿಂಗಾ !

## ತಿಂಡಿ

ತಿಂಡಿಯನು ಕೊಡು, ತಾಯೆ, ಹೇಳಿದುದ ಮಾಡುವೆನು;
ಬೇಕಾದುದೆಲ್ಲವನು ನೀಡುವೆನು ನಿನಗೆ!
ಮೂಡುತಿಹ ಚಂದಿರನ ಸೆರೆಹಿಡಿದು ತಂದು
ಕೂಡುವೆನು ನಿನ್ನ ಮಾಂಗಲ್ಯದಲ್ಲಿ ಇಂದು.
ಮಿಣುಕುತಿಹ ತಾರೆಗಳನೆಲ್ಲವನು ಕೊಯ್ದು.
ಮಣಿಮಾಲೆಗಳ ಮಾಡುವೆನು ನಿನಗೆ ನೆಯ್ದು.
ಮಳೆಬಿಲ್ಲುಗಳನೆಲ್ಲ ಹಿಡಿದೆಳೆದು ತಂದು
ನೆಯ್ಯುವೆನು ನಿನಗೊಂದು ಸೀರೆಯನು ಇಂದು.
ಏಳು ಕಡಲನು ದಾಟಿ, ಏಳು ಗಿರಿಗಳ ನೆಗೆದು,
ಕೂದಲಿಗೆ ತಹೆ ತೈಲದಂಬುಧಿಯ ಮೊಗೆದು.
ಏನು ಬೇಕದ ಹೇಳು! ವೈಕುಂಠ ಬೇಕೆ?
ತಳಿಪ ಬೆಳ್ಳಿಯ ಬೆಟ್ಟ ಕೈಲಾಸ ಬೇಕೆ?
ಚಲಿಸದಾ ಹಿಮಗಿರಿಯು ಬೇಕೇನು ಹೇಳು.
ಸುರನದಿಯ ತರಲೇನು? ಎಲೆ ತಾಯೆ, ಕೇಳು,
ಯಾರು ಮಾಡದ ಕಾರ್ಯಗಳ ಬೆಸಸು ನನಗೆ:
ಯಾರು ಪಡೆಯದ ವಸ್ತುಗಳ ತರುವೆ ನಿನಗೆ!
ತಿಂಡಿಯನು ಕೊಡು, ತಾಯೆ, ಹೇಳಿದುದ ಮಾಡುವೆನು;
ಬೇಕಾದುದೆಲ್ಲವನು ನೀಡುವೆನು ನಿನಗೆ!

# ಹಿರೇತನ

ತಂಗಿಯು ಎಂಥಾ ದಡ್ಡಳೆ, ಅಮ್ಮಾ,
ಅತಿಶುದ್ಧ ಹೆಡ್ಡಳು ಕಾಣಮ್ಮಾ!

ಬೀದಿಯೊಳೆಸೆಯುವ ದೀಪಗಳಾಳಿಗು
ಗಗನದೊಳೆಸೆಯುವ ತಾರೆಗಳಾಳಿಗು
ಭೇದವೆ ತಿಳಿಯದು ಅವಳಿಗೆ, ಅಮ್ಮಾ!
ಅತಿಶುದ್ಧ ದಡ್ಡಳು ಅವಳಮ್ಮಾ!

ಅಡುಗೆಯ ಊಟದ ಆಟವನಾಡಲು,
ಕಲ್ಲನು ನಿಜವಾದ ಕಡುಬೆಂದು ಭಾವಿಸಿ
ಬಾಯಿಗೆ ಹಾಕಲು ಎಳಸುವಳಮ್ಮಾ!
ಅವಳೆಂಥ ದಡ್ಡಳು ನೋಡಮ್ಮಾ!

ಮಕ್ಕಳ ಪುಸ್ತಕವನು ತೆರೆದವಳಿಗೆ
"ಅ ಆ ಇ ಈ ಗಳ ಕಲಿ" ಎಂದರೆ
ಹಾಳೆಯ ಹರಿವಳು, ಸುಮ್ಮನೆ ನಗುವಳು;
ತಂಗಿಯ ಓದಿದೆಯೇನಮ್ಮಾ!

ಕೋಪದಿ ತಲೆಯಲ್ಲಾಡಿಸಿ ಅವಳನು
"ತುಂಟೀ" ಎನ್ನುತ ಬೈದರೆ ನಾನು,
ನಗುವಳು ದೊಡ್ಡ ವಿನೋದವು ಎಂದು.
ಅವಳೆಂಥ ಮೊಂಡಳು ನೋಡಮ್ಮಾ!

ಅಪ್ಪನು ಮನೆಯಲ್ಲಿಲ್ಲದ ಸುದ್ದಿಯ
ಎಲ್ಲರು ಬಲ್ಲರು; ಆದರೆ ನಾನು
"ಅಪ್ಪಾ" ಎನ್ನಲು ಸುತ್ತಲು ನೋಡುತ
ಹತ್ತಿರ ಇಹನೆಂದೆಣಿಸುವಳು!

ಬಟ್ಟೆಯ ಒಗೆಯಲು ಮನೆಗೈತರುವಾ
ಅಗಸನ ಕತ್ತೆಯ ಗುಂಪಿನ ಶಾಲೆಗೆ

ಐಗಳು ನಾನಾಗೆ, “ಮೇಷ್ಟರೆ” ಎನ್ನದೆ,
ಸುಮ್ಮನೆ “ಅಣ್ಣಯ್ಯ” ಎನ್ನುವಳು!

ತಂಗಿಯು ಚಂದ್ರನ ಹಿಡಿಯುವಳಂತಮ್ಮ!
ಹೆಡ್ಡಳು; ಬಿಸ್ಕತ್ತ ಬಿಕ್ಕತ್ತು ಎಂಬಳು.
ಅಯ್ಯಯ್ಯೋ, ಅವಳೆಂಥ ದಡ್ಡಳೆ, ಅಮ್ಮಾ,
ಅತಿಶುದ್ಧ ಹೆಡ್ಡಳು ಕಾಣಮ್ಮಾ!

(ರವೀಂದ್ರನಾಥ ಠಾಕೂರರಿಂದ)

## ಹೂವುಗಳು

ಗಂಧರ್ವರದೋ ಬಂದಿರುವರಿದೋ
ನಮ್ಮ ಹೂದೋಟಕೆ ನೋಡಮ್ಮಾ!
ಬಣ್ಣ ಬಣ್ಣದಾ ಕಣ್ಣು ಕಣ್ಣಿನಾ
ಸಿಂಗಾರ ಮಾಡಿಕೊಂಡಿಹರಮ್ಮಾ!
— ಅದೋ ನೋಡು ನೋಡಮ್ಮಾ !

ಮುಗುಳು ನಗುವರು! ಮಗುಳೆ ನೆಗೆವರು !
ಮಂದಾನಿಲಣ್ಣಗೆ ಬಾಗುವರು!
— ಅಗೋ ತಲೆದೂಗುವರು!
ನೋಡುವ ಕಣ್ಣಿಗೆ ಸವಿಯುವ ಹೃದಯಕೆ
ಹೊನ್ನಿನ ರಂಗನು ಮೆತ್ತುವರು!
ಮುತ್ತುಗಳೊತ್ತುವರು!

ಚಿಮ್ಮಿ ಚಿಮ್ಮಿ ಕುಣಿದಾಡುತ್ತಾ
ಕರೆವರೆನ್ನನೂ ಸನ್ನೆಮಾಡುತ್ತಾ. —
ಕೇಳದೋ ಕೇಳಮ್ಮಾ,
ಅವರ ಮೌನದಲಿ ನೂರು ತುತೂರಿಯ
ಮಹಾ ಪಿತೂರಿಗಳಿವೆಯಮ್ಮಾ !
— ಅದೊ ಕೇಳು ಕೇಳಮ್ಮಾ !

ಕೆಲರು ಹಳದಿಯಲಿ, ಕೆಲರು ನೀಲಿಯಲಿ,
ಕೆಲರು ಮಿಂದಿಹರು ಕೆಂಪಿನಲಿ!
ಎಲ್ಲ ಕೆನ್ನೆಯರ ಗಲ್ಲ ಕೆನ್ನೆಯಲಿ
ನಲ್ಲ ಮುತ್ತಿಹವು ಪೆಂಪಿನಲಿ!
ತಾಯಿಯಕ್ಕರೆಯ ಬಿಗಿದ ತಕ್ಕೆಯನು
ತಬ್ಬಿಕೊಂಡು ಬಂದಿರುವರಮ್ಮಾ !
ಸವಿಯ ಸೆರೆಗೆ ಬದಲಾಗಿ ಮುಕ್ತಿಯನು
ಒಪ್ಪಿ ಅಪ್ಪಿ ತಂದಿರುವರಮ್ಮಾ !
— ಗಿಡದ ಹೂವಾಗುವೆನು ನಾನಮ್ಮಾ !
— ನನ್ನ ಬಿಡು ಬೇಗನಮ್ಮಾ !

ಗಂಧರ್ವರದೋ ಬಂದಿರುವರಿದೋ
ನಮ್ಮ ಹೋದೋಟಕೆ ನೋಡಮ್ಮಾ!
ಬಣ್ಣ ಬಣ್ಣದಾ ಕಣ್ಣು ಕಣ್ಣಿನಾ
ಸಿಂಗಾರ ಮಾಡಿಕೊಂಡಿಹರಮ್ಮಾ!
— ಅದೊ ನೋಡು ನೋಡಮ್ಮಾ !

## ಆಟ ಮುಗಿಯುವ ಮುನ್ನ

ಆಟ ಮುಗಿಯುವ ಮುನ್ನ
ಕರೆಯ ಬೇಡೆನ್ನ!
ಆಟ ಮುಗಿಯಲು ನಾನೆ
ಬರುವೆನಮ್ಮಾ !

ಇದ್ದರೂ ಸವಿಯೂಟ
ಬೇಡವೆನಗೀಗ;
ಪೂರೈಸಲೀ ಆಟ
ಬರುವೆನಾಗ!

ಆಟ ತೊಲಗುವುದಲ್ಲಾ
ಎಂದಳುವುದಿಲ್ಲ;

ಆಟ ಮುಗಿಯಲು ನಾನೆ
ಬರುವೆನಮ್ಮಾ !

ಬರಲೆನಗೆ ಭಯವಿಲ್ಲ;
ಸಂದೇಹವಿಲ್ಲ;
ತಾಯೆ ನಿನ್ನಾನಂದ.
ನಿನ್ನ ಕಂದ!

೧೬-೧೦-೧೯೧೬

## ಮಲ್ಲಿಗೆ ಹೂಗಳು

ಅಂಗಳದಲ್ಲಿಹ ಮಲ್ಲಿಗೆಯಣ್ಣರು
ಎಲ್ಲಿಂದ ಬಂದರು ಹೇಳಮ್ಮಾ?
ಅಂಕೆಯೆ ಇಲ್ಲದ ಗೆಲವನು ತೋರುತ
ನಲಿನಲಿದೊಲಿಯುತಲಿಹರಮ್ಮಾ!

ಶಾಲೆಯನಗಲಿದ ಸೋದರರಂದದಿ
ಕೇಕೆಯ ಹಾಕುತಲಿಹರಮ್ಮಾ!
ಮಲ್ಲಿಗೆಯಣ್ಣರ ನೀರವ ಜಯ ಜಯ
ಘೋಷವೆ ಕೇಳುವೆ ನಾನಮ್ಮಾ!

ಹೂವಿನ ಹಸುರಿನ ತಿಂಗಳು ಚೈತ್ರವು
ಬಿಡುವಿನ ಕಾಲುವೆ ಏನಮ್ಮಾ?
ರಜದಲಿ ಆಡಲು ಇಲ್ಲಿಗೆ ಬರುವರೆ?
ನಮ್ಮನೆ ಅತಿಥಿಗಳೇನಮ್ಮಾ?

ಬಳ್ಳಿಯ ಒಳಗಿಹ ನಿದ್ದೆಯ ಊರಿನ
ಕನಸಿನ ಶಾಲೆಯೊಳೋದುವರೆ?
ಕನಸಿನಾನಂದವ ಸವಿಯುತ ನಲಿಯುತ
ಕನಸಿನ ಕತೆಗಳ ಕೇಳುವರೆ?

ಮಲ್ಲಿಗೆಯಣ್ಣರ ಶಾಲೆಗೆ ಹೋಗುವೆ
ಕನಸಿನ ಕತೆಗಳನಾಲಿಸಲು;
ಅಲ್ಲಿಯ ಕನಸುಗಳೆಲ್ಲವನಿಲ್ಲಿಗೆ
ಕದ್ದೊಯ್ದು ತರುವೆನು ನಿನಗಮ್ಮಾ!

## ಸೋತೇ ನೀನ್! ಗೆದ್ದೇ ನಾನ್!

ಅವ್ವಾ, ಅಪ್ಪನ ನೀನೇಕೆ
'ಅಪ್ಪಾ' ಎನ್ನುವುದಿಲ್ಲವ್ವಾ?
ಅಪ್ಪನ 'ಅಪ್ಪಾ' ಎನ್ನದಿರೆ
'ಕೆಟ್ಟವನಾಗುವೆ ನೀ'ನೆಂದೆ!
ಕೆಟ್ಟವಳಲ್ಲವೆ ನೀನವ್ವಾ;
ಅಪ್ಪನ 'ಅಪ್ಪಾ' ಎನ್ನವ್ವಾ !

ಸುಮ್ಮನೆ ಕುಳಿತಹೆ ಏಕವ್ವಾ?
ಉತ್ತರವೀಗಲೆ ಬೇಕವ್ವಾ !
ಮುತ್ತಿಡೆ ಬಿಡುವೆನೆ ಹೇಳವ್ವಾ?
ನಕ್ಕರೆ ಬಿಡುವೆನೆ ಹೇಳವ್ವಾ?
ಬುದ್ಧಿಯ ಹೇಳುವೆ ನನಗವ್ವಾ,
ಬುದ್ಧಿಯು ನಿನಗೇ ಇಲ್ಲವ್ವಾ !

ಸೋತೇ ಸೋತೇ ಸೋತೇ ನೀನ್ !
ಗೆದ್ದೇ ಗೆದ್ದೇ ಗೆದ್ದೇ ನಾನ್ !
ಸೋತೇ ನೀನ್! ಗೆದ್ದೇ ನಾನ್ !

೨೫-೦೭-೧೯೨೮

## ಮೂರ್ತಿಯ ವಿಜ್ಞಾನ

ಮಳೆಯೆಂದರೇನಮ್ಮ? ಗುಡುಗೆಂದರೇನಮ್ಮ?
ಮಿಂಚೆಂದರೇನಮ್ಮ? ಮುಗಿಲೆಂದರೇನಮ್ಮ?
ಹೇಳುವೆ ನಾನೆಲ್ಲ ಕೇಳಮ್ಮ!
ಚೆನ್ನಾಗಿ ಕಿವಿಗೊಟ್ಟು ಕೇಳಮ್ಮ!

ದೇವರ ಲೋಕದ ಬಾಲಕರಾಡುವ
ಉಕ್ಕಿನ ಚೆಂಡದು, ಕೇಳಮ್ಮಾ!
ಮೇಲಿನ ಲೋಕದ ನೆಲವದು, ಅಮ್ಮಾ,
ಚೆನ್ನದ ಉಕ್ಕಿನ ನೆಲವಮ್ಮಾ!

ಏನಮ್ಮ ನಿನಗಿನ್ನು ಗೊತ್ತಿಲ್ಲವೇನಮ್ಮ?
ನಾನೆಲ್ಲ ಹೇಳುವೆ ಕೇಳಮ್ಮಾ!
ಅಣ್ಣಯ್ಯ, ಅಕ್ಕಯ್ಯ, ತಮ್ಮಯ್ಯ ಸಭೆ ಸೇರಿ
ನನ್ನೀ ಯುಕ್ತಿಯ ಒಪ್ಪಿರಹರಮ್ಮಾ!

ಚೆಂಡಾಡಲುಕ್ಕಿನ ಚೆಂಡೆದ್ದು ಬೀಳೆ
ಗುಡುಗಾಗಿ ಕೇಳುವುದೆಮಗಮ್ಮಾ!
ಉಕ್ಕಿನ ಚೆಂಡೆದ್ದು ಬೀಳಲು ಕಿಡಿಯೆದ್ದು
ಮಿಂಚಾಗಿ ತೋರುವುದೆಮ್ಮಗಮ್ಮಾ!

ಬಾಲರ ಮೈಬೆವರಿ ನೀರಾಗಿ ಸೋರಲು
ಮಳೆಯಾಗಿ ಬೀಳುವುದೆಮಗಮ್ಮಾ!
ಉಕ್ಕಿನ ಧೂಳೆದ್ದು ಕಾರ್ಮುಗಿಲಂದದಿ
ತೇಲುತ್ತ ಬರುವುದು ಕೇಳಮ್ಮಾ!

ಹುಡುಗರ ಆಟ ಸಾಧಾರಣವೇನಮ್ಮ?
ಬರಗಾಲ ಬರದಂತೆ ಮಾಡುವುದಮ್ಮಾ!
ಹುಡುಗರು ಆಟವ ಬಿಟ್ಟಂದಿಗಮ್ಮಾ,
ಲೋಕವೆ ನಡೆಯದು ಕೇಳಮ್ಮಾ !

## ಜೋಗುಳ

ಮಲಗು ಮಲಗೆಲೆ ಕಂದಾ ಜೋ! ಜೋ !
ಮಲಗು ಎನ್ನಾನಂದಾ ಜೋ! ಜೋ !
ನಿದ್ದೆಯೂರದು ಚೆಂದ ಜೋ! ಜೋ !
ಮುದ್ದು ಕಂದಾ ಮಲಗು ಜೋ! ಜೋ !

ಶುದ್ಧ ಚಿತ್ತನೆ ಮಲಗು ಜೋ! ಜೋ !
ನಿತ್ಯ ಸಿದ್ಧನೆ ಮಲಗು ಜೋ! ಜೋ !
ಉತ್ತಮರೊಳುತ್ತಮನೆ ಜೋ! ಜೋ !
ಸಚ್ಚಿದಾನಂದನೇ ಜೋ! ಜೋ !

ನಿನಗಾಗಿ ಜಗದುದಯ ಜೋ ಜೋ !
ನಿನಗಾಗಿ ಜಗದ ಲಯ ಜೋ ಜೋ !
ಪರಬ್ರಹ್ಮನೈ ನೀನು ಜೋ ಜೋ !
ಶಿವ ನೀನು! ಶಿವ ನೀನು! ಜೋ ಜೋ !

ಕಂದಾ! ಪರಂಜ್ಯೋತಿ ಜೋ ಜೋ !
ಪುಣ್ಯಾತ್ಮನಚ್ಯುತನೆ ಜೋ ಜೋ !
ಶಿವ ನೀನು! ಶಿವ ನೀನು! ಜೋ ಜೋ !
ಶಿವ ನೀನು ಜೋ! ಶಿವ ನೀನು ಜೋ!
ಜೋ ಜೋ ಜೋ!

೧೭-೧೨-೧೯೨೮

## ಹೂವಿನ ಬೇಲಿ

ತೋಟದ ಬೇಲಿಯ ಹೂಮಯವಾಗಿದೆ
ಬಾರವ್ವ, ತಂಗಿಯೆ, ಹೂ ಕೊಯ್ಯಲು!
ಹೂವಿನ ಮಧುವನು ಹೀರಲು ಬಂದಿವೆ
ಬಗೆ ಬಗೆ ಬಣ್ಣದ ಹಕ್ಕಿಗಳು!

ಉದಯದ ಊರಿಂದ ಬಂದಿಹವವುಗಳು
ತಂದಿವೆ ವಿಧ ವಿಧ ಹಾಡುಗಳ;

ಹೂಗಳ ಕೊಯ್ಯುವ ನೆವದಿಂದ ಕದಿಯೋಣ
ಅವುಗಳ ಕೊರಲಿನ ಇಂಚರವ!

ಜಡೆ ಹೂವಿಗಮ್ಮನ ಹಾಡಿಗಾಗಕ್ಕನ
ಏತಕೆ ಸುಮ್ಮನೆ ಕಾಡಿಸುವೆ?
ಸೀರೆಗಾಗಪ್ಪನ ಪೀಡಿಪುದೇತಕೆ?
ಕೇಳೆನ್ನ ಕೊಡುವೆನು ಬೇಕಾದುದ!

ಮುಡಿಯಲು ಬೇಲಿಯ ಹೂಗಳ ಕೊಡುವೆನು;
ಹಾಡಲು ಹಕ್ಕಿಗಳಿನಿದನಿಯ!
ಹೊದೆಯಲು ಕೊಡುವೆನು ಕಾಮನಬಿಲ್ಲಿನ
ಹಕ್ಕಿಯ ಗರಿಗಳ ಮೋಹವನು!

ಬಾರೆನ್ನ ಜತೆಯಲ್ಲಿ, ತಂಗಿಯೆ, ತೋಟಕೆ;
ನೆಲವೆಲ್ಲ ಹಸುರಿಂದ ಮೆರೆಯುತಿದೆ!
ಅಮ್ಮನ ಸೆರಗನು ಬಿಡು ಬಿಡು ಬಾ ಬೇಗ,
ಹೂವಿನ ಬೇಲಿಯು ಕರೆಯುತಿದೆ!

## ಕೈ ಮುಚ್ಚಾಟ!

ಬೆಳಗಾಗಿದ್ದಿತು; ಎಳೆಬಿಸಿಲೆಲ್ಲಿಯು
ಹಸುರಿನ ಕೆನ್ನೆಯ ಚುಂಬಿಸುತಿದ್ದಿತು!
ಆಡುತಲಿದ್ದಾ ಮುದ್ದಿನ ಮೂರ್ತಿಯು
ಓಡೋಡೈತಂದೆನಗಿಂತೆಂದ:

“ಕೈಯಲ್ಲಿರುವದು ಏನಣ್ಣಾ?
ಬೇಗನೆ! ಬೇಗನೆ ಹೇಳಣ್ಣಾ!”

ಮುಷ್ಟಿಯ ಹಿಡಿದಾ ಕೈಯನು ನೋಡಿದೆ;
ಪ್ರಶ್ನೆಯ ಕೇಳುವ ಕಂಗಳ ನೋಡಿದೆ;
ಮೂರ್ತಿಯ ಒಳಗಿನ ನಿಜವನು ನೋಡಿದೆ;
ನೀಲಾಕಾಶವ ನೋಡುತ ನಿಂತೆ:

ಹಕ್ಕಿಗಳಿಂಚರ ಬೀರಿತ್ತು
ತಳಿರೊಳು ತಂಬೆಲರಾಡಿತ್ತು!

ಮೂರ್ತಿಯು "ಬೇಗಾ ಬೇಗಾ!" ಎಂದ;
ನನಗಾದುದು ಒಂದತ್ಯಾನಂದ.
ಪ್ರಶ್ನೆಯಲಿದ್ದಾ ಉತ್ತರವರಿತು
ಇಂತೆಂದೆನು ನಾ ಮೂರ್ತಿಯ ಕುರಿತು:

"ಬಲ್ಲೇ! ಬಲ್ಲೇ! ಎಲ್ಲಾ ಇಷ್ಟೇ!
ಆದರೆ ಹೇಳಲು ಹೆದರುವೆ ಅಷ್ಟೇ!
ಅದು! ಅದು! ಹೇಳಲೊ ಬೇಡವೊ?" "ಹೇಳು"
"ಆದದ್ದಾಗಲಿ ಹೇಳಿಯೆ ಬಿಡುವೆನು:
ಕೈಯಲ್ಲಿರುವುದು ಬ್ರಹ್ಮಾಂಡ!"

ಮೂತಿಯು ನಕ್ಕನು; ಕೈ ಬಿಚ್ಚಿದನು;
"ಒಹೋ! ಅಣ್ಣಾ! ಸೋತೇ" ಎಂದನು.
ಕೈ ಕಡೆ ನೋಡಿದೆ; ತೃಣವೊಂದಲ್ಲಿ
ಕ್ಷೀರ ಸಮುದ್ರದ ವಿಷ್ಣುವಿನಂತೆ
ಪುಟ್ಟಂಗೈಯೊಳು ರಾಜಿಸಿತು!

ನಾನಾಗವನನು ಅಣಕಿಸುತೆಂದೆ:
"ಬಲ್ಲೇ, ಮೂರ್ತೀ, ಮಾಯೆ ಇದೆಲ್ಲ;
ಬ್ರಹ್ಮವನಡಗಿಸಿ, ಇಟ್ಟಿಹೆ ಹುಲ್ಲ!
ಬ್ರಹ್ಮವೆ ಹುಲ್ಲಾಗಿದೆ ಕಂಡ್ಯಾ?
ಕೈಯಲ್ಲಿರುವುದು ಬ್ರಹ್ಮಾಂಡ!"

೨-೧೨-೧೯೨೬

## ಅಮ್ಮನ ಮೂರ್ತಿ

“ಮೂರ್ತಿಯೆ, ಬಲ್ಲೆಯ ನೀನಾರೆಂದು
ಬಲ್ಲೆಯ ಹೇಳಣ್ಣಾ!”
“ನಮ್ಮಮ್ಮನ ಮೂರ್ತಿಯು, ನಾನೆಂದು
ಬಲ್ಲೆಯ ಕಾಣಣ್ಣಾ!”
“ನೀನಾರೆಂಬುದನರಿಯೆಯೊ ಮೂರ್ತಿ
ವಿಶ್ವವ ತುಂಬಿದೆ ನಿನ್ನಯ ಕೀರ್ತಿ!”
“ಬಲ್ಲೆನು, ನಾ ನಮ್ಮಮ್ಮನ ಮೂರ್ತಿ:
ಅಮ್ಮನೆ ವಿಶ್ವವು, ಪ್ರೀತಿಯೆ ಕೀರ್ತಿ!”

“ನೀನಾರೆಂಬುದನರಿಯೆಯೊ ಮೂರ್ತಿ;
ನಿಜವನು ಹೇಳಲು ಬೆದರುವೆ ನಾನು!
ತಾಯಿಯು ನೀನಾರೆಂಬುದನರಿತರೆ
ನಿನ್ನನ್ನೆಂದಿಗು ಪೂಜಿಪಳು;
ನಿನ್ನನ್ನೆತ್ತುವ ತಂದೆಯು ತಿಳಿಯನು
ಬ್ರಹ್ಮವನೆತ್ತುವೆ ತಾನೆಂದು!”
“ನೀನೇನಾದರು ಹೇಳಣ್ಣಾ, ನಾ
ನಮ್ಮಮ್ಮನ ಮೂರ್ತಿಯು ಕಾಣಣ್ಣಾ!”

“ನೀನಾರೆಂಬುದನರಿಯೆಯೊ ನೀನು.
ಕೇಳೈ ನಿಜವನು ತಿಳಿಸುವೆ ನಾನು:
ಕಾಲಾತೀತನು ನೀನಾಗಿರುವೆ,
ದೇಶಾತೀತನು ನೀನಾಗಿರುವೆ,
ಜನನ ಮರಣಗಳ ಮೀರಿಹೆ ನೀನು,
ಪಾಪಪುಣ್ಯಗಳ ದಾಂಟಿಹೆ ನೀನು;
ನಿನ್ನೊಳಗಡಗಿದೆ ಬ್ರಹ್ಮಾಂಡ,
ಮೂರ್ತಿ, ನೀನೇ ಬ್ರಹ್ಮಾಂಡ!”
“ನೀನೇನಾದರು ಹೇಳಣ್ಣಾ, ನಾ
ನಮ್ಮಮ್ಮನ ಮೂರ್ತಿಯು ಕಾಣಣ್ಣಾ!”

“ಮೂರ್ತೀ, ನೀನಾರೆಂಬುದನರಿಯೆ
ಹೇಳಿದರದ ನೀನೆಂದಿಗು ಮರೆಯೆ.

ಬ್ರಹ್ಮವು ಜನಿಸಿತು ನಿನ್ನಿಂದ!
ಬ್ರಹ್ಮಕೆ ನೀನೇ ಆನಂದ!
ಆದಿಯ ಕಾಣದ ಪುರಷನು ನೀನು
ಅಂತವನರಿಯದ ಆತ್ಮನು ನೀನು"
"ನೀನೇನಾದರು ಹೇಳಣ್ಣಾ, ನಾ
ನಮ್ಮಮ್ಮನ ಮೂರ್ತಿಯು ಕಾಣಣ್ಣಾ!"

"ಖಂಡಿತ ನಿಜವನು ಹೇಳುವೆ, ಮೂರ್ತಿ,
ವಿಶ್ವವ ತುಂಬಿದೆ ನಿನ್ನ ಜ್ಯೋತಿ!
ರವಿ ಉದಯಿಸುವುದು ನಿನಗಾಗಿ;
ಉಡುಗಣವೆಸೆವುದು ನಿನಗಾಗಿ;
ನಿಯಮಗಳೆಲ್ಲಾ ನಿನಗಾಗಿ
ಕೆಲಸದಿ ತೊಡಗಿವೆ ತಲೆಬಾಗಿ;
ಕೋಕಿಲೆಯುಲಿವುದು ನಿನಗಾಗಿ;
ಲೊಕವೆ ಜನಿಸಿದೆ ನಿನಗಾಗಿ!
ಸರ್ವವು ನಿನಗಾಗಿರುವುದೊ ಮೂರ್ತಿ,
ನೀನೆ ಅನಂತನು ಚಿನ್ಮಯ ಮೂರ್ತಿ!"
"ನೀನೇನಾದರು ಹೇಳಣ್ಣಾ, ನಾ
ನಮ್ಮಮ್ಮನ ಮೂರ್ತಿಯು ಕಾಣಣ್ಣಾ!"

೦೨-೧೨-೧೯೨೮

## ರಾಜನ ಮೆರವಣಿಗೆ

"ಎಲ್ಲಿಗೆ ಹೋಗಿದ್ದೆ ಕಂದಯ್ಯ, ಮೂರುತಿ?
ಬಂದವರಾರೆಂದು ಹೇಳುವೆಯಾ?"
"ಕಳ್ಳನ ನೋಡಲು ಹೋಗಿದ್ದೆವಮ್ಮಾ;
ಬಲು ದೊಡ್ಡ ಕಳ್ಳನು ಅವನಮ್ಮಾ!

"ಕಳ್ಳನ ಹೆಸರದು 'ರಾಜ' ಎಂದಂತೆ,
ಪಹರೆಯ ಸೈನಿಕರೆಷ್ಟಮ್ಮ?

ಕತ್ತಿಯ ಕೋವಿಯ ಈಟಿಯ ದೊಣ್ಣೆಯ
ಸುತ್ತಲು ಹಿಡಿದಿದ್ದರವರಮ್ಮಾ!

“ಹಿಂಗಡೆ ಮುಂಗಡೆ ಬಲಗಡೆ ಎಡಗಡೆ
ಸುತ್ತಲು ಪೋಲೀಸಿನವರಮ್ಮಾ;
ಇಂಥಾ ಕಳ್ಳನು ಇರುವನು ಎಂದು
ನಾನೆಂದು ತಿಳಿದಿರಲಿಲ್ಲಮ್ಮಾ!

“ಕಳ್ಳಗೆ ಹೆದರಿಕೆ ಹುಟ್ಟಿಸಬೇಕೆಂದು
ಹಾರಿದುವಮ್ಮಾ ಗುಂಡುಗಳು.
ಒಂದಲ್ಲ, ಎರಡಲ್ಲ, ಲೆಕ್ಕವೆ ಇಲ್ಲಮ್ಮ!
ಕಳ್ಳನದೆಂಥಾ ಎದೆಯಮ್ಮಾ!

“ಕಳ್ಳನು ತಪ್ಪಿಸಿಕೊಂಡೋಡದಂತೆ
ಜನಗಳು ಸೇರಿದ್ದರಮ್ಮಾ!
ಹೆದರಿಸಲವನನು ಜೈ ಜೈ ಎನ್ನುತ
ಎಲ್ಲರು ಕೂಗಿದರಮ್ಮಾ!

“ಕೂಗಿದೆ ನಾನೂ ‘ಜೈ ಜೈ’! ಎಂದು;
ದುರು ದುರು ನನ್ನನೆ ನೋಡಿದನು.
ಅಣಕಿಸಿ ನಾನೂ ದುರು ದುರು ನೋಡಿದೆ!
ನಾನೇನು ಹೇಡಿಯೆ ಹೇಳಮ್ಮಾ?

“ನೀ ಬರದಿದ್ದುದು ಒಳ್ಳೆಯದಾಯ್ತಮ್ಮ!
ಕಳ್ಳನ ಕಣ್ಣದು ಕೆಡುಕ್ಕಮ್ಮಾ!
ಒಲುಮೆಯ ಕವಚವ ಪಡೆದಿಹ ನನಗದು
ಇನಿತೂ ಕೇಡಲ್ಲವಂತಮ್ಮ!”